quickmarketreports.com Date : 02-10-2015

# ಹೊಸ ಬೆಳೆಯ ಆವಕದಿಂದ ನೀರುಳ್ಳಿ ದರ 20 ಶೇಕಡಾ ಇಳಿಕೆ ಸಂಭವ

ಕರ್ನಾಟಕದ ಖಾರಿಫ್ ಬೆಳೆಯ ನೀರುಳ್ಳಿ ಈಗಾಗಲೇ ಬೆಂಗಳೂರು, ಹುಬ್ಬಳ್ಳಿ ಮುಂತಾದ ಕರ್ನಾಟಕ ಮಂಡಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದೆ. ಇದರೊಂದಿಗೆ ಸೌರಾಷ್ಟ್ರದಿಂದಲೂ ಹೊಸ ಬೆಳೆಯ ನೀರುಳ್ಳಿ ಮಾರುಕಟ್ಟೆಗಳಿಗೆ ಬರಲಿದ್ದು, ಶೀಘ್ರದಲ್ಲಿಯೇ ಮಹಾರಾಷ್ಟ್ರದ ಹೊಸಬೆಳೆಯ ಕಟಾವು ಪ್ರಾರಂಭವಾಗಲಿರುವುದರಿಂದ ನೀರುಳ್ಳಿ ದರ 15–20 ಶೇಕಡಾ ಇಳಿಕೆಯಾಗಬಹುದೆನ್ನಲಾಗಿದೆ. ಪ್ರಾರಂಭದ ಖಾರಿಫ್ ಬೆಳೆಯ ಸುಮಾರು 50 ಶೇಕಡಾ ಉತ್ಪಾದನೆ ಕರ್ನಾಟಕದಿಂದ ಬರುತ್ತಿದೆ. ಭಾರತದ ಒಟ್ಟು ನೀರುಳ್ಳಿ ಉತ್ಪಾದನೆ 19 ಮಿಲಿಯನ್ ಟನ್‌ಗಳೆಂದು ಅಂದಾಜಿಸಲಾಗಿದೆ.

ಇತ್ತೀಚೆಗಿನ ರೈಡ್‌ಗಳ ನಂತರ ಮಹಾರಾಷ್ಟ್ರದ ದಾಸ್ತಾನುದಾರರು ತಮ್ಮ ಇನ್‌ವೆಂಟರಿ ದಾಸ್ತಾನನ್ನು ಮಾರುಕಟ್ಟೆಗೆ ಬಿಡಲಾರಂಭಿಸಿದ್ದಾರೆ. ಕನಿಷ್ಠ ರಫ್ತು ದರವನ್ನೂ ಆಮದು ಮಾಡುವ ರಾಷ್ಟ್ರಗಳ ದರಕ್ಕಿಂತ ಹೆಚ್ಚಳವಾಗುವಂತೆ ಸರಕಾರ ಟನ್‌ಗೆ 700 ಡಾಲರ್‌ಗಳಿಗೇರಿಸಿದೆ. ಎಂ. ಎಂ. ಟಿ. ಸಿ. ಯಿಂದ ಆಮದು ಮಾಡುತ್ತಿರುವ ನೀರುಳ್ಳಿಯೂ ಅಕ್ಟೋಬರ್ ತಿಂಗಳಲ್ಲಿ ಮಾರುಕಟ್ಟೆಗೆ ಲಭ್ಯವಾಗುವ ಸಂಭವವಿದೆ. ಕೊನೆಯ ಹಂತದಲ್ಲಿ ಮಹಾರಾಷ್ಟ್ರದಲ್ಲಿ ಮಳೆಯಾಗಿರುವುದು ಅಲ್ಲಿನ ಬೆಳೆಗೆ ಪೂರಕವೆನ್ನಲಾಗಿದ್ದು ಮಹಾರಾಷ್ಟ್ರದ ಈ ಬಾರಿಯ ಖಾರಿಫ್ ಬೆಳೆ ಹೆಚ್ಚಳವಿರಬಹುದೆಂದು ಪಿಂಪಲ್‌ಗಾಂವ್ ಎಪಿಎಂಸಿ ಯ ಡೈರೆಕ್ಟರ್‌ರಾದ ಅತುಲ್ ಶಾ ಅಭಿಪ್ರಾಯವಾಗಿದೆ.